ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12

ಸಂಖ್ಯೆ: ಪಪೂಶಿಇ/ಶೈಶಾ-2/ Unacademy/2021-22 ದಿನಾಂಕ:27.01.2022

ಸುತ್ತೋಲೆ

ವಿಷಯ: Unacademy ಸಂಸ್ಥೆಯವರ "Prodigy 2022-National Scholarship Test" ಗೆ ವಿದ್ಯಾರ್ಥಿಗಳು ಉಚಿತವಾಗಿ ನೊಂದಾಯಿಸಿಕೊಳ್ಳುವ ಬಗ್ಗೆ ಹಾಗೂ ಪರೀಕ್ಷೆಯನ್ನು ತೆಗೆದುಕೊಳ್ಳುವ ಕುರಿತು.

ಉಲ್ಲೇಖ: ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು ಇವರ ಪತ್ರ ಸಂಖ್ಯೆ ಇಪಿ 201 ಎಂ.ಹೆಚ್.ಟಿ. 2021 ದಿನಾಂಕ 20.01.2022

* * * * *

Unacademy ಸಂಸ್ಥೆಯವರ "Prodigy 2022-National Scholarship Test" ನ್ನು ಸ್ಪರ್ಧಾತ್ಮಕ ಪರೀಕ್ಷೆಗಳಾದ IIT- JEE, NEET-UG, K-12 ಆಕಾಂಕ್ಷಿಗಳಿಗೆ ಉಚಿತವಾಗಿ ನಡೆಸಲು ಉದ್ದೇಶಿಸಿದ್ದು, "Prodigy – National Scholarship Test" ಅಲ್ಲಿ ಅತೀ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕಾಲೇಜು ಶಿಕ್ಷಣವನ್ನು ಪೂರ್ಣ ಪ್ರಮಾಣ ಪ್ರಾಯೋಜಿಸುವುದಾಗಿ ಹಾಗೂ ಉತ್ತಮ ಶ್ರೇಣಿ ಪಡೆದ ವಿದ್ಯಾರ್ಥಿಗಳಿಗೆ Unacademy ಸಂಸ್ಥೆಯವರು ವಿದ್ಯಾರ್ಥಿವೇತನ ಹಾಗೂ ಇನ್ನಿತರೆ ಆಕರ್ಷಕ ಉಡುಗೊರೆಗಳನ್ನು ನೀಡುವುದಾಗಿ ಪ್ರಸ್ತಾವನೆಯಲ್ಲಿ ತಿಳಿಸಿರುತ್ತಾರೆ. ಕಳೆದ ಸಾಲಿನಲ್ಲಿ 5 ಲಕ್ಷಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಸದರಿ Scholarship ಬರೆದಿರುವುದಾಗಿ ತಿಳಿಸಿರುತ್ತಾರೆ.

"Prodigy – National Scholarship Test" ನಲ್ಲಿ 7ನೇ ತರಗತಿಯಿಂದ 12ನೇ ತರಗತಿ ಸರ್ಕಾರಿ, ಅನುದಾನಿತ ಶಾಲಾ ವಿದ್ಯಾರ್ಥಿಗಳು ಹಾಗೂ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಬಹುದು ಎಂದು ಸಂಸ್ಥೆಯವರು ತಿಳಿಸಿ, ಹೆಚ್ಚು ವಿದ್ಯಾರ್ಥಿಗಳನ್ನು ನೊಂದಾಯಿಸಲು ಕೋರಿರುತ್ತಾರೆ.

ಪ್ರಸ್ತುತ ವರ್ಷದ "Prodigy 2022-National Scholarship Test" ದಿನಾಂಕ ಈ ಕೆಳಗಿನಂತಿದೆ

ಜನವರಿ ಮಾಹೆ – 23.01.2022 ಮತ್ತು 29.01.2022

ಫೆಬ್ರವರಿ ಮಾಹೆ – 06.02.2022 ಮತ್ತು 13.02.2022

"Prodigy 2022-National Scholarship Test" ಗೆ ನೊಂದಾಯಿಸಿಕೊಳ್ಳಲು ಈ ಕೆಳಗಿನಂತೆ ಕ್ರಮಗಳನ್ನು ವಿದ್ಯಾರ್ಥಿಗಳು ಅನುಸರಿಸುವುದು.

Step 1 : Click on link https://prodigy.onelink.me/5A94/d96f75ff

Step 2: Click on "Enrol for free

Step 3: Select a test from IIT- JEE, NEET-UG, IIT- JEE Practice Tests, Nett-UG Practice Tests

Step 4: Click on "Go to Test"

Step 5: Click on Enrol Now" and fill in your details. Use the code "GOVT22" to avail this test for free.

**Taking the test on your selected date & time:**

Step 1: Click on the test link shared on your email.

Step 2: Start the Test

ಆದ್ದರಿಂದ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿರುವ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರಿಗೆ ಮೇಲ್ಕಂಡ (Prodigy 2022-National Scholarship Test) ಉಚಿತವಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ತಿಳಿಸುವಂತೆ ಈ ಮೂಲಕ ಸೂಚಿಸಿದೆ.

R Kusum
27/9/2022
ಜಂಟಿ ನಿರ್ದೇಶಕರು(ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ

**ಪ್ರತಿಗಳು:-**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಕಛೇರಿ ಪ್ರತಿ.